All India Radio: Bangalore
National Bulletins In Kannada
16.05.2025 / 19.35 hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಆಪರೇಷನ್ 'ಸಿಂಧೂರ್'ನಲ್ಲಿ ಭಾರತೀಯ ವಾಯುಪಡೆಯ ತ್ವರಿತ ಕ್ರಮಕ್ಕೆ ರಕ್ಷಣಾ ಸಚಿವ ರಾಜನಾಥ್ ಶ್ಲಾಘನೆ

- ಪಾಕಿಸ್ತಾನದ ಭಯೋತ್ಪಾದನೆ ವಿರುದ್ಧ ಜಾಗತಿಕ ಬೆಂಬಲ ಪಡೆಯಲು ವಿವಿಧ ದೇಶಗಳಿಗೆ ಬಹು ಪಕ್ಷ ಸಂಸದರ ನಿಯೋಗ ಕಳುಹಿಸಲು ಕೇಂದ್ರ ನಿರ್ಧಾರ

- ಟರ್ಕಿ, ಅಜರ್‌ಬೈಜಾನ್ ವ್ಯಾಪಾರ ಮತ್ತು ವಾಣಿಜ್ಯ ಸಂಬಂಧ ಬಹಿಷ್ಕರಿಸಲು ಅಖಿಲ ಭಾರತ ವ್ಯಾಪಾರಿಗಳ ಒಕ್ಕೂಟ ನಿರ್ಧಾರ

- ನವದೆಹಲಿಯಲ್ಲಿಂದು ಉಕ್ಕು ಸಚಿವಾಲಯದ ಹೊಸ ಜಾಲತಾಣಕ್ಕೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಚಾಲನೆ

- ಜಾಗತಿಕ ಆರ್ಥಿಕ ಅನಿಶ್ಚಿತತೆಯ ಹೊರತಾಗಿಯೂ, ಭಾರತದ ಸರಕು - ಸೇವೆಗಳ ಒಟ್ಟು ರಫ್ತು ಶೇಕಡ ೧೨.೭ ರಷ್ಟು ಬೆಳವಣಿಗೆ

<><*<><>*><>

ಆಪರೇಷನ್ 'ಸಿಂಧೂರ್' ಸಮಯದಲ್ಲಿ ಭಾರತೀಯ ವಾಯುಪಡೆಯ ತ್ವರಿತ ಮತ್ತು ನಿರ್ಣಾಯಕ ಕ್ರಮಕ್ಕಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶ್ಲಾಘಿಸಿದ್ದಾರೆ. ಭುಜ್ ವಾಯುಪಡೆ ನಿಲ್ದಾಣದಲ್ಲಿಂದು ಯೋಧರನ್ನು ಉದ್ದೇಶಿಸಿ ಮಾತನಾಡಿದ ಅವರು, ಇದು ದೇಶ - ವಿದೇಶಗಳಲ್ಲಿರುವ ಎಲ್ಲಾ ಭಾರತೀಯರು ಹೆಮ್ಮೆಪಡುವಂತೆ ಮಾಡಿದೆ ಎಂದು ಹೇಳಿದರು. ಪಾಕಿಸ್ತಾನದಲ್ಲಿ ಆಶ್ರಯ ಪಡೆದಿದ್ದ ಭಯೋತ್ಪಾದಕ ಮೂಲಸೌಕರ್ಯವನ್ನು ನಾಶಮಾಡಲು ವಾಯುಪಡೆಗೆ ಕೇವಲ ೨೩ ನಿಮಿಷಗಳು ಬೇಕಾಯಿತು. ಈ ಕಾರ್ಯಾಚರಣೆ ಭಯೋತ್ಪಾದನೆಯ ವಿರುದ್ಧ ಬಲವಾದ ಸಂದೇಶವನ್ನು ರವಾನಿಸುವುದರ ಜೊತೆಗೆ, ಭಾರತದ ಮಿಲಿಟರಿ ಶಕ್ತಿ ಮತ್ತು ಸನ್ನದ್ಧತೆಯನ್ನು ಪ್ರದರ್ಶಿಸಿತು ಎಂದು ಅವರು ಒತ್ತಿ ಹೇಳಿದರು. ಆಪರೇಷನ್ 'ಸಿಂಧೂರ್'ನಲ್ಲಿ, ಸಶಸ್ತ್ರ ಪಡೆಗಳು ಶತ್ರುಗಳ ಮೇಲೆ ಪ್ರಾಬಲ್ಯ ಸಾಧಿಸಿದ್ದಲ್ಲದೆ, ಅವರನ್ನು ನಾಶಮಾಡುವಲ್ಲಿಯೂ ಯಶಸ್ವಿಯಾದವು. ಆಪರೇಷನ್ 'ಸಿಂಧೂರ್' ಸಮಯದಲ್ಲಿ ಭಾರತೀಯ ಸೇನೆಯು ವಹಿಸಿದ ಪರಿಣಾಮಕಾರಿ ಪಾತ್ರವನ್ನು ಭಾರತದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲಿಯೂ ಪ್ರಶಂಸಿಸಲಾಗುತ್ತಿದೆ ಎಂದು ಸಚಿವ ರಾಜನಾಥ್ ಸಿಂಗ್ ಹೇಳಿದರು.

<><*<><>*><>

ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಪಾಕಿಸ್ತಾನದ ಕೈವಾಡ ಬಹಿರಂಗಪಡಿಸಲು ಮತ್ತು ಗಡಿಯಾಚೆಗಿನ ಭಯೋತ್ಪಾದನೆಯ ವಿರುದ್ಧ ಜಾಗತಿಕ ಬೆಂಬಲ ಪಡೆಯಲು ಕೇಂದ್ರ ಸರ್ಕಾರ

ರಾಜತಾಂತ್ರಿಕ ನಡೆ ಅನುಸರಿಸಲು ನಿರ್ಧರಿಸಿದೆ. ಮೊದಲ ಹೆಜ್ಜೆಯಾಗಿ ಬಹು-ಪಕ್ಷ ಸಂಸದರ ನಿಯೋಗವನ್ನು ಪ್ರಮುಖ ದೇಶಗಳಿಗೆ ಕಳುಹಿಸಲು ನಿರ್ಧರಿಸಿದೆ.
೪೮ ಸದಸ್ಯರ ನಿಯೋಗವು ಇದೇ ೨೨ ರಿಂದ ಜೂನ್ ೧ ರವರೆಗೆ ವಿವಿಧ ದೇಶಗಳಿಗೆ ಪ್ರಯಾಣಿಸಲಿದೆ. ಸಂಸದೀಯ ಮತ್ತು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ನಿಯೋಗದ ನೇತೃತ್ವ ವಹಿಸಲಿದ್ದಾರೆ. ತಲಾ ಆರು ಸದಸ್ಯರನ್ನು ಒಳಗೊಂಡ ಎಂಟು ನಿಯೋಗ ಪಾಕಿಸ್ತಾನ ಭಯೋತ್ಪಾದನೆಗೆ ಬೆಂಬಲ ನೀಡುವುದರ ವಿರುದ್ಧ ಸಾಕ್ಷ್ಯ ಸಮೇತ  ವಿವರ ನೀಡಲಿದೆ.  ಕಾಂಗ್ರೆಸ್ ಸಂಸದರಾದ ಶಶಿ ತರೂರ್, ಮನೀಶ್ ತಿವಾರಿ, ಪಂಜಾಬ್‌ನ ಸಂಸತ್ ಸದಸ್ಯ ವಿಕ್ರಮ್‌ಜಿತ್ ಸಿಂಗ್ ಸಹ್ನಿ, ಅಸಾದುದ್ದೀನ್ ಓವೈಸಿ ಮುಂತಾದವರು ತಂಡದಲ್ಲಿದ್ದಾರೆ.

<><*<><>*><>

ದೇಶಾದ್ಯಂತದ ೧೨೫ ಕ್ಕೂ ಹೆಚ್ಚು ಪ್ರಮುಖ ವ್ಯಾಪಾರಿಗಳು ಟರ್ಕಿ ಮತ್ತು ಅಜರ್‌ಬೈಜಾನ್ ಜೊತೆಗಿನ ಎಲ್ಲಾ ರೀತಿಯ ವ್ಯಾಪಾರ ಮತ್ತು ವಾಣಿಜ್ಯ ಸಂಬಂಧಗಳನ್ನು ಬಹಿಷ್ಕರಿಸಲು ನಿರ್ಧರಿಸಿದ್ದಾರೆ. ಇದರಲ್ಲಿ ಪ್ರಯಾಣ ಮತ್ತು ಪ್ರವಾಸೋದ್ಯಮವೂ ಸೇರಿದೆ. ಟರ್ಕಿ ಇಲ್ಲವೇ ಅಜರ್‌ಬೈಜಾನ್‌ನಲ್ಲಿ ಯಾವುದೇ ಚಲನಚಿತ್ರದ ಚಿತ್ರೀಕರಣ ನಡೆಸಬಾರದು. ಯಾವುದೇ ಚಿತ್ರೀಕರಣ ನಡೆದರೆ, ಜನರು ಅಂತಹ ಚಲನಚಿತ್ರಗಳನ್ನು ಬಹಿಷ್ಕರಿಸಬೇಕೆಂದು ಭಾರತೀಯ ಚಲನಚಿತ್ರೋದ್ಯಮಕ್ಕೆ ಮನವಿ ಮಾಡಿದ್ದಾರೆ. ೨೪ ರಾಜ್ಯಗಳ ಪ್ರತಿನಿಧಿಗಳು ಭಾಗವಹಿಸಿದ್ದ ಅಖಿಲ ಭಾರತ ವ್ಯಾಪಾರಿಗಳ ಒಕ್ಕೂಟ ಕರೆದಿದ್ದ ವ್ಯಾಪಾರ ನಾಯಕರ ರಾಷ್ಟ್ರೀಯ ಸಮ್ಮೇಳನದಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

<><*<><>*><>

ಪಹಲ್ಗಾಮ್‌ನಲ್ಲಿ ೨೬ ಅಮಾಯಕರನ್ನು ಹತ್ಯೆ ಮಾಡಿದ ಭಯೋತ್ಪಾದಕ ದಾಳಿಗೆ ಪ್ರತಿಕ್ರಿಯೆಯಾಗಿ ಭಾರತ ನಡೆಸಿದ ಪ್ರತಿದಾಳಿ 'ಆಪರೇಷನ್ ಸಿಂದೂರ' ಅನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಶ್ಲಾಘಿಸಿದ್ದಾರೆ. ನವದೆಹಲಿಯ ನಾರ್ತ್ ಬ್ಲಾಕ್‌ನಲ್ಲಿ ಹೊಸ ಮಲ್ಟಿ-ಏಜೆನ್ಸಿ ಸೆಂಟರ್ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಸಚಿವರು, 'ಸಿಂದೂರ' ಕಾರ್ಯಾಚರಣೆಯನ್ನು ಪ್ರಧಾನಿ ನರೇಂದ್ರ ಮೋದಿಯವರ ಬಲವಾದ ರಾಜಕೀಯ ಇಚ್ಛಾಶಕ್ತಿ, ತಡೆರಹಿತ ಗುಪ್ತಚರ ಸಮನ್ವಯ ಮತ್ತು ಭಾರತದ ಸಶಸ್ತ್ರ ಪಡೆಗಳ ಅಸಾಧಾರಣ ಶಕ್ತಿಯ "ವಿಶಿಷ್ಟ ಸಂಕೇತ" ಎಂದು ಬಣ್ಣಿಸಿದ್ದಾರೆ. ಆಪರೇಷನ್ ಸಿಂದೂರ, ಪ್ರಧಾನಿಯವರ ದೃಢಸಂಕಲ್ಪ, ನಮ್ಮ ಗುಪ್ತಚರ ಸಂಸ್ಥೆಗಳ ನಿಖರತೆ ಮತ್ತು ನಮ್ಮ ಮೂರು ಸಶಸ್ತ್ರ ಪಡೆಗಳ ಅಸಾಧಾರಣ ಸಾಮರ್ಥ್ಯದ ಪ್ರತೀಕವಾಗಿದೆ ಎಂದು ಹೇಳಿದರು. ಪಹಲ್ಗಾಮ್ ದಾಳಿಯ ನಂತರ ಪ್ರಾರಂಭಿಸಲಾದ ಕಾರ್ಯಾಚರಣೆಯು, ಭಾರತ ಮತ್ತು ಪಾಕಿಸ್ತಾನದ ನಡುವಿನ ನಾಲ್ಕು ದಿನಗಳ ಕಾಲ ನಡೆದ ಸಂಘರ್ಷದ ತೀವ್ರತೆಯಿಂದಾಗಿ ಜಾಗತಿಕ ಗಮನ ಸೆಳೆಯಿತು. ಮೇ ೧೦ ರಂದು ಪರಸ್ಪರ ಒಪ್ಪಂದದೊಂದಿಗೆ ಕೊನೆಗೊಂಡಿತು. ಭಾರತವು "ಯಾವುದೇ ಭಯೋತ್ಪಾದಕ ಕೃತ್ಯವನ್ನು ಯುದ್ಧದ ಕೃತ್ಯವೆಂದು ಪರಿಗಣಿಸುತ್ತದೆ ಎಂದು ಮೊದಲೇ ಎಚ್ಚರಿಸಿತ್ತು ಎಂದು  ಸಚಿವ ಅಮಿತ್ ಶಾ ತಿಳಿಸಿದರು.

<><*<><>*><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದು ನವದೆಹಲಿಯಲ್ಲಿ ೨೦೨೩ ರ ಸಾಲಿನ ೫೮ ನೇ ಜ್ಞಾನಪೀಠ ಪ್ರಶಸ್ತಿಯನ್ನು ಸಂಸ್ಕೃತ ವಿದ್ವಾಂಸ ಜಗದ್ಗುರು ರಾಮಭದ್ರಾಚಾರ್ಯರಿಗೆ ಪ್ರದಾನ ಮಾಡಿದರು.
ಜಗದ್ಗುರು ರಾಮಭದ್ರಾಚಾರ್ಯ ಮತ್ತು ಖ್ಯಾತ ಉರ್ದು ಕವಿ ಮತ್ತು ಗೀತರಚನೆಕಾರ ಗುಲ್ಜಾರ್ ಅವರನ್ನು ೨೦೨೩ ರ ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

<><*<><>*><>

ನವದೆಹಲಿಯಲ್ಲಿಂದು ಉಕ್ಕು ಸಚಿವಾಲಯದ ಹೊಸ ಜಾಲತಾಣಕ್ಕೆ ಕೇಂದ್ರ ಉಕ್ಕು ಮತ್ತು ಭಾರೀ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಚಾಲನೆ ನೀಡಿದರು. ಈ ಕುರಿತು ಸಾಮಾಜಿಕ ಮಾಧ್ಯಮ ಪೋಸ್ಟ್ ಮಾಡಿರುವ ಸಚಿವರು, ಪರಿಷ್ಕೃತ ವೆಬ್‌ಸೈಟ್ ಎಲ್ಲಾ ಭಾಗೀದಾರರಿಗೆ ಸಕಾಲಿಕ ಮತ್ತು ಪ್ರಮುಖ ಮಾಹಿತಿಯೊಂದಿಗೆ ಸಬಲೀಕರಣಗೊಳಿಸುತ್ತದೆ ಎಂದು ಹೇಳಿದರು. ಈ ಜಾಲತಾಣ, ಪಾರದರ್ಶಕತೆ, ಪ್ರವೇಶಸಾಧ್ಯತೆ ಮತ್ತು ದಕ್ಷತೆಯನ್ನು ಹೆಚ್ಚಿಸಲು ಬಳಕೆದಾರ ಸ್ನೇಹಿ ಇಂಟರ್ಫೇಸ್, ವರ್ಧಿತ ಸೈಬರ್ ಭದ್ರತೆ ಮತ್ತು ಭಾರತ ಸರ್ಕಾರದ ಜಾಲತಾಣಗಳಿಗೆ ಪ್ರವೇಶಕ್ಕೆ ಮಾರ್ಗಸೂಚಿಗಳ ಅನುಸರಣೆಯನ್ನು ಒಳಗೊಂಡಿದೆ. ಆಧುನಿಕ ವಿನ್ಯಾಸ, ನೀತಿ ದಾಖಲೆಗಳು, ಉದ್ಯಮ ದತ್ತಾಂಶ ಮತ್ತು ಉಪಕ್ರಮಗಳ ಮಾಹಿತಿ ಸೇರಿದಂತೆ ಹಲವು ಅಂಶಗಳು ಈ ಜಾಲತಾಣದ ಪ್ರಮುಖ ವೈಶಿಷ್ಟ್ಯಗಳಾಗಿವೆ.
ಈ ಜಾಲತಾಣವು, ಪ್ರಮುಖ ವೈಶಿಷ್ಟ್ಯಗಳಲ್ಲಿ ಬಹು ಭಾರತೀಯ ಭಾಷೆಗಳಲ್ಲಿ ಲಭ್ಯವಿದ್ದು, ಉತ್ಪಾದನಾ ಅಂಕಿ-ಅಂಶಗಳು, ನೀತಿ ನವೀಕರಣ, ವಿವಿಧ ಯೋಜನೆ, ಉಪಕ್ರಮಗಳ ವಿವರ ಒಳಗೊಂಡಂತೆ ಭಾರತೀಯ ಉಕ್ಕಿನ ಉದ್ಯಮದ ಬಗ್ಗೆ ಸಮಗ್ರ ಮಾಹಿತಿ ನೀಡುತ್ತದೆ.

<><*<><>*><>

ಅಮೆರಿಕದ ಸುಂಕ ಏರಿಕೆಯಿಂದ ಉಂಟಾದ ಜಾಗತಿಕ ಆರ್ಥಿಕ ಅನಿಶ್ಚಿತತೆಯ ಹೊರತಾಗಿಯೂ, ಭಾರತದ ಸರಕು ಮತ್ತು ಸೇವೆಗಳ ಒಟ್ಟು ರಫ್ತು ೨೦೨೫ ಏಪ್ರಿಲ್‌ನಲ್ಲಿ ಶೇಕಡಾ ೧೨.೭ ರಷ್ಟು ಬೆಳವಣಿಗೆ ದಾಖಲಿಸಿದ್ದು, ೭೩.೮೦ ಶತಕೋಟಿ ಡಾಲರ್ ತಲುಪಿದೆ. ಕಳೆದ ವರ್ಷ ಇದೇ ತಿಂಗಳಲ್ಲಿ ಇದು ೬೫.೪೮ ಶತಕೋಟಿ ಡಾಲರ್ ಆಗಿತ್ತು  ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ. ದೇಶದ ಸರಕು ರಫ್ತು ಶೇಕಡಾ ೯.೦೩ ರಷ್ಟು ಏರಿಕೆಯಾಗಿ ೩೮.೪೯ ಶತಕೋಟಿ ಡಾಲರ್‌ಗೆ ತಲುಪಿದೆ, ಹೆಚ್ಚಿನ ಮೌಲ್ಯದ ಎಲೆಕ್ಟ್ರಾನಿಕ್ಸ್ ಮತ್ತು ಎಂಜಿನಿಯರಿಂಗ್ ಸರಕುಗಳು ಅತ್ಯಧಿಕ ಬೆಳವಣಿಗೆಯನ್ನು ದಾಖಲಿಸಿವೆ. ಎಲೆಕ್ಟ್ರಾನಿಕ್ ಸರಕುಗಳ ರಫ್ತು ಏಪ್ರಿಲ್‌ನಲ್ಲಿ ಶೇಕಡಾ ೩೯.೫೧ ರಷ್ಟು ಹೆಚ್ಚಾಗಿ ಸುಮಾರು ೩.೭ ಶತಕೋಟಿ ಡಾಲರ್‌ಗೆ ತಲುಪಿದೆ, ಕಳೆದ ವರ್ಷ ಇದೇ ತಿಂಗಳಲ್ಲಿ ಇದು ೨.೬೫ ಶತಕೋಟಿ ಡಾಲರ್ ಆಗಿತ್ತು ಎಂದು ಸಚಿವಾಲಯ ಮಾಹಿತಿ ನೀಡಿದೆ.

<><*<><>*><>

ಜಮ್ಮು ಮತ್ತು ಕಾಶ್ಮೀರದಲ್ಲಿ, ಕುಲ್ಗಾಮ್ ಮತ್ತು ಪುಲ್ವಾಮಾ ಜಿಲ್ಲೆಗಳಲ್ಲಿ ಇತ್ತೀಚೆಗೆ ನಡೆದ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಗಳು ಮಹತ್ವದ್ದಾಗಿದ್ದು, ಆರು ಭಯೋತ್ಪಾದಕರನ್ನು ನಿರ್ಮೂಲನೆ ಮಾಡಲು ಭದ್ರತಾ ಪಡೆಗಳು ಪ್ರಯತ್ನಿಸಿವೆ. ಶ್ರೀನಗರದಲ್ಲಿ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ಮೇಜರ್ ಜನರಲ್ ಧನಂಜಯ್ ಜೋಶಿ, ಜನರಲ್ ಆಫೀಸರ್ ಕಮಾಂಡಿಂಗ್ ವಿಕ್ಟರ್ ಫೋರ್ಸ್, ಕಾಶ್ಮೀರ ಐಜಿಪಿ ವಿ.ಕೆ.ಬಿರ್ಡಿ ಮತ್ತು ಸಿಆರ್‌ಪಿಎಫ್ ಕಾರ್ಯಾಚರಣೆ ಐಜಿಪಿ ಮಿತೇಶ್ ಕುಮಾರ್ ೪೮ ಗಂಟೆಗಳ ಕಾಲ ನಡೆದ ಕಾರ್ಯಾಚರಣೆಗಳ ವಿವರಣೆ ನೀಡಿದರು.
ಇದೇ ವೇಳೆ ಐಜಿಪಿ ವಿ.ಕೆ.ಬಿರ್ಡಿ ಮಾತನಾಡಿ, ಪಹಲ್ಗಾಮ್‌ನಲ್ಲಿ ಇತ್ತೀಚೆಗೆ ನಡೆದ ಘಟನೆಯ ನಂತರ ಭಯೋತ್ಪಾದನಾ ನಿಗ್ರಹಣೆಗೆ ಪ್ರಯತ್ನ ತೀವ್ರಗೊಳಿಸುವ ಅಗತ್ಯವನ್ನು ಒತ್ತಿ ಹೇಳಿದರು.

<><*<><>*><>

ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷದಿಂದ ಒಂದು ವಾರ ಸ್ಥಗಿತಗೊಂಡಿದ್ದ ೧೮ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿ ನಾಳೆಯಿಂದ ಮತ್ತೆ ಆರಂಭಗೊಳ್ಳುತ್ತಿದೆ. ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಾಳೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಕೊಲ್ಕೊತಾ ನೈಟ್ ರೈಡರ್ಸ್ ತಂಡಗಳು ಸೆಣಸಾಟ ನಡೆಸವೆ. ಈ

ಋತುವಿನಲ್ಲಿ ಫೈನಲ್ ಸೇರಿ ೧೭ ಪಂದ್ಯಗಳು ಬಾಕಿ ಉಳಿದಿವೆ. ಗುಜರಾತ್ ಟೈಟಾನ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ಸೇರಿ ೭ ತಂಡಗಳ ನಡುವೆ ಪ್ಲೇಆಫ್‌ಗಾಗಿ ಭಾರೀ ಪೈಪೋಟಿ ಏರ್ಪಟಿದೆ. ಅಗ್ರ ಎರಡು ಸ್ಥಾನಗಳಲ್ಲಿರುವ ಗುಜರಾತ್ ಮತ್ತು ಬೆಂಗಳೂರು ತಂಡಗಳು ಇನ್ನೊಂದು ಪಂದ್ಯದಲ್ಲಿ ಗೆಲುವು ಸಾಧಿಸಿದರೂ ಪ್ಲೇಆಫ್‌ಗೆ ಅರ್ಹತೆ ಪಡೆಯಲಿವೆ. ಈ ಬಾರಿ ಐಪಿಎಲ್ ಪಂದ್ಯಾವಳಿಗೆ ಹೆಚ್ಚಿನ ಭದ್ರತೆ ಒದಗಿಸಲಾಗುತ್ತಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>